# ಕರ್ನಾಟಕ ಸರ್ಕಾರದ ನಡವಳಿ

ವಿಷಯ: 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳ ಅವಧಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (R-WBCIS) ಅಡಿಯಲ್ಲಿ ವಿವಿಧ ತೋಟಗಾರಿಕೆ ಬೆಳೆಗಳ ಅಂತಿಮಗೊಳಿಸಲಾದ ಟರ್ಮ್ ಶೀಟ್ ಗಳು ಹಾಗೂ ಇತರೆ ಅನುಬಂಧಗಳ ವಿವರಗಳನ್ನು ಅಧಿಸೂಚಿಸಿ ಆದೇಶ ಹೊರಡಿಸುವ ಬಗ್ಗೆ.

ಉಲ್ಲೇಖ: 1. ಕೇಂದ್ರ ಸರ್ಕಾರದ ಪತ್ರ ಸಂ:13015/03/2016 - Credit –II ದಿನಾಂಕ:23-02-2016 ಮತ್ತು 25.04.2018

2. ಸರ್ಕಾರದ ಆದೇಶದ ಸಂಖ್ಯೆ:ತೋಇ/36/ತೋಸವಿ/2016, ದಿನಾಂಕ:03-03-2016.

3.ಕೇಂದ್ರ ಸರ್ಕಾರದ ಪತ್ರ ಸಂ:11018/01/2016 –Credit –II (Pt), ದಿನಾಂಕ:05-05-2016.

4. ನಿರ್ದೇಶಕರು,ತೋಟಗಾರಿಕೆ ಇಲಾಖೆ ರವರ ಪತ್ರ ಸಂಖ್ಯೆ :ತೋಇ /ತೋಜಂನಿ /ತೋಇಅ–ಯೋನಿಘ / ಸತೋಅ(ಬೆವಿ)/02/2018-19 ದಿನಾಂಕ:03.11.2018

5. ದಿನಾಂಕ:13.02.2019 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ ಸಭೆಯ ನಡವಳಿಗಳು.

6. No:DH/JDH(HeG-PMU)/AHO(CI)/02/2018-19 Date: 08-03-2019 & 26.03.2019

7. ದಿನಾಂಕ:14.03.2019 ರಂದು ನಡೆದ ಪ್ರೀ ಬಿಡ್ ಸಭೆಯ ನಡುವಳಿಗಳು.

8. ನಿರ್ದೇಶಕರು,ತೋಟಗಾರಿಕೆ ಇಲಾಖೆ ರವರ ಪತ್ರ ಸಂಖ್ಯೆ: ತೋಇ/ತೋಜಂನಿ/ತೋಇಅ-ಯೋನಿಘ/ ಸತೋಅ-1/ಬೆವಿ/01/2018-19 ದಿನಾಂಕ:03-05-2019

********

**ಪ್ರಸ್ತಾವನೆ:**

1. ಮೇಲೆ ಓದಲಾದ (1)ರ ಪತ್ರದಲ್ಲಿ ಕೇಂದ್ರ ಸರ್ಕಾರವು ಬೆಳೆ ವಿಮಾ ಯೋಜನೆಯನ್ನು ಸರಳಗೊಳಿಸಿ ಮತ್ತು ರೈತರಿಗೆ ಸುಲಭ ದರದಲ್ಲಿ ಪ್ರೀಮಿಯಂ ಹಾಗೂ ಉತ್ತಮ ಸೇವೆ ಒದಗಿಸಲು ಕೇಂದ್ರವಲಯ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ ಹಾಗೂ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು [(Restructured Weather Based Crop Insurance Scheme (R-WBCIS)] 2016-17 ನೇ ಸಾಲಿನ ಮುಂಗಾರಿನಿಂದ ಜಾರಿಗೊಳಿಸಲು ಅನುಮೋದನೆ ನೀಡಿರುತ್ತದೆ.
2. ಮೇಲೆ ಓದಲಾದ (2)ರ ಆದೇಶದಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸುವ ಸಲುವಾಗಿ Term Sheet ಗಳನ್ನು ತಯಾರಿಸಲು ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿ(DLTC) ಯನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ .
3. ಮೇಲೆ ಓದಲಾದ (3)ರ ಪತ್ರದಲ್ಲಿ 2016-17 ನೇ ಸಾಲಿಗೆ ಬೆಳೆ ವಿಮೆ ಯೋಜನೆಯಡಿ ಸಕಾಲದಲ್ಲಿ ಮಾಹಿತಿ ನಮೂದಿಸುವ ಅಧಿಸೂಚನೆಯ ಮಾಹಿತಿಯನ್ನು ಬೆಳೆ ವಿಮೆ ಪೋರ್ಟಲ್ ನಲ್ಲಿ ನಿಗದಿತ ಅವಧಿಯೊಳಗೆ ನಮೂದಿಸಲು ಕೇಂದ್ರ ಸರ್ಕಾರವು ಸೂಚನೆ ನೀಡಿರುತ್ತದೆ.
4. ಮೇಲೆ ಓದಲಾದ (4)ರ ಪತ್ರದಲ್ಲಿ ಜಿಲ್ಲಾ ಹಂತದ ತಾಂತ್ರಿಕ ಸಮಿತಿಯ ಮೂಲಕ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಜಿಲ್ಲೆಗೆ ಆಯ್ಕೆ ಮಾಡಲಾದ ಬೆಳೆಗಳಿಗೆ ಟರ್ಮ್ ಶೀಟ್ ಗಳನ್ನು ತಯಾರಿಸಿ ಒದಗಿಸಲು ತಿಳಿಸಲಾಗಿರುತ್ತದೆ.

ಅದರಂತೆ, ಜಿಲ್ಲಾ ಹಂತದ ತಾಂತ್ರಿಕ ಸಮಿತಿಗಳು (DLTC) ವಿವಿಧ ತೋಟಗಾರಿಕೆ ಬೆಳೆಗಳಿಗೆ Term Sheet ಗಳನ್ನು ತಯಾರಿಸಿ ವಿಮಾಘಟಕಗಳಿಗೆ (ಗ್ರಾಮಪಂಚಾಯಿತಿ / ನಗರ ಸ್ಥಳೀಯ ಸಂಸ್ಥೆಗಳ ಮಟ್ಟಕ್ಕೆ ) ಅಧಿಸೂಚಿಸಲು ಮಾಹಿತಿಯನ್ನು ಸಲ್ಲಿಸಿರುತ್ತಾರೆ.

5. ಮೇಲೆ ಓದಲಾದ (5) ರಂತೆ ರಾಜ್ಯಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ ಸಭೆಯಲ್ಲಿ ಈ ಮುಂದಿನ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

5.1 ಈ ಯೋಜನೆಯಲ್ಲಿ ಒಳಪಡಿಸಲಾಗುವ ಎಲ್ಲಾ ಬೆಳೆಗಳಿಗೆ ಬೆಳೆ ಸಾಲ ಪಡೆಯುವ ರೈತರನ್ನು ಕಡ್ಡಾಯವಾಗಿ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಐಚ್ಛಿಕವಾಗಿ ಬೆಳೆ ವಿಮೆಗೆ ಒಳಪಡಿಸಬೇಕೆಂದು ನಿರ್ಧರಿಸಲಾಗಿರುತ್ತದೆ.

5.2 ವಿಮಾ ಘಟಕಗಳಲ್ಲಿ ಹವಾಮಾನ ಅಂಶಗಳನ್ನು ಅಳೆಯಲು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಸ್ಥಾಪಿಸಿರುವ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರಗಳನ್ನು ಉಪಯೋಗಿಸಲು ಮತ್ತು ಯಾವುದೇ ಕಾರಣದಿಂದ ಹವಾಮಾನ ಅಂಶಗಳ ಮಾಹಿತಿಯು ಸಂಬಂಧಿಸಿದ ಹವಾಮಾನ ಕೇಂದ್ರಗಳಲ್ಲಿ ಲಭ್ಯವಾಗದಿದ್ದಲ್ಲಿ, ಸಮೀಪದ ಪರ್ಯಾಯ ಹವಾಮಾನ ಕೇಂದ್ರಗಳ ಮಾಹಿತಿಯನ್ನು ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರ ಲೆಕ್ಕಹಾಕುವುದು. ಮಳೆಯ ಪ್ರಮಾಣವನ್ನು ಅಳೆಯಲು ಗ್ರಾಮಪಂಚಾಯಿತಿ ಮಟ್ಟದಲ್ಲಿ ಅಳವಡಿಸಲಾದ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರವನ್ನು ಮತ್ತು ಇತರೆ ಹವಾಮಾನ ಅಂಶಗಳಾದ ತಾಪಮಾನ, ಗಾಳಿಯ ವೇಗ, ಆದ್ರತೆ ಇತ್ಯಾದಿ., ಇವುಗಳನ್ನು ಅಳೆಯಲು ಹೋಬಳಿ/ತಾಲ್ಲೂಕು ಕೇಂದ್ರಗಳಲ್ಲಿ ಅಥವಾ ಹೋಬಳಿ/ತಾಲ್ಲೂಕು ಕೇಂದ್ರದ ಹತ್ತಿರದಲ್ಲಿರುವ ಹವಾಮಾನ ಕೇಂದ್ರವನ್ನು ಉಪಯೋಗಿಸುವುದು.

6. ಈ ಯೋಜನೆಯಡಿ ಮುಂಗಾರು ಹಂಗಾಮಿಗೆ ಅನುಮೋದಿಸಲಾದ ತೋಟಗಾರಿಕೆ ಬೆಳೆಗಳಾದ ಹಸಿರುಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವೀಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ಸಿಂಬೆ, ಮತ್ತು ಪರಂಗಿ ಬೆಳೆಗಳನ್ನು ನೊಂದಾಯಿಸಲು ಅಂತಿಮ ದಿನಾಂಕವನ್ನು ದಿ:30-06-2019 ಮತ್ತು ಮಾವು ಬೆಳೆಯನ್ನು ನೊಂದಾಯಿಸಲು 31.07.2019 ರವರೆಗೆ ನಿಗದಿಪಡಿಸಲಾಗಿರುತ್ತದೆ. ಹಿಂಗಾರು ಹಂಗಾಮಿನ ತೋಟಗಾರಿಕೆ ಬೆಳೆಗಳಾದ ಮಾವು, ದ್ರಾಕ್ಷಿ, ದಾಳಿಂಬೆ ಮತ್ತು ಹಸಿರುಮೆಣಸಿನಕಾಯಿ ಬೆಳೆಗಳನ್ನು ನೊಂದಾಯಿಸಲು ಅಂತಿಮ ದಿನಾಂಕವನ್ನು ದಿ:15-11-2019 ರವರೆಗೆ ನಿಗದಿಪಡಿಸಲಾಗಿರುತ್ತದೆ. ಅಂತಿಮ ದಿನಾಂಕವು ಸಾಲ ಪಡೆದ ಹಾಗು ಸಾಲ ಪಡೆಯದ ರೈತರಿಗೆ ಒಂದೇ ಆಗಿರುತ್ತದೆ.

7. ದಿನಾಂಕ:13/02/2019 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ SLCCCI ಸಭೆಯಲ್ಲಿ ಚರ್ಚಿಸಿದಂತೆ ಹಾಗೂ ಕಳೆದ ಸಾಲುಗಳಲ್ಲಿ ಅನುಸರಿಸಿದ ಪ್ರಕ್ರಿಯೆಯಂತೆ, 2019-20 ನೇ ಸಾಲಿನಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಆಹ್ವಾನಿಸಲು ಅವಶ್ಯಕವಿದ್ದು, ಆಯುಕ್ತರು, ಕೃಷಿ ಇಲಾಖೆ ರವರ ಪತ್ರ ಸಂಖ್ಯೆ: ಜಕೃನಿ(ಬೆವಿ)/PMFBY/ 2019-20 Bid/2019-20/1 ದಿನಾಂಕ: 26.02.2019 ಪ್ರಕಾರ ಹಾಗೂ ಪರಿಷ್ಕೃತ PMFBY ಅನುಷ್ಠಾನ ಮಾರ್ಗಸೂಚಿಯ ಪ್ರಕಾರ ಇ ಟೆಂಡರ್ ಅನ್ನು ಉಲ್ಲೇಖ (6) ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಇ ಟೆಂಡರ್ ಪ್ರಕಾರ ಗುಚ್ಛವಾರು (Cluster) ಆಯ್ಕೆಯಾಗುವ L1 ಬಿಡ್ಡುದಾರರಾದ ವಿಮಾ ಸಂಸ್ಥೆಗಳಿಗೆ ಅನುಷ್ಠಾನ ವಿಮಾಸಂಸ್ಥೆಗಳಾಗಿ ನೇಮಿಸುವ ಸಂಬಂಧ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

8. ಪ್ರಸಕ್ತ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ R-WBCIS ವಿಮಾ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಟೆಂಡರ್ ಮೂಲಕ ಆಯ್ಕೆಯಾಗುವ L1 ಬಿಡ್ಡರ್ ಗಳಿಗೆ ಗುಚ್ಛವಾರು ಹಂಚಿಕೆ ಮಾಡಲಾಗುವ ವಿಮಾ ಸಂಸ್ಥೆಗಳು ಮುಂದಿನ ಅಂಶಗಳನ್ನು ಪಾಲಿಸಬೇಕಾಗಿರುತ್ತದೆ.

ಅ. 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಅನುಷ್ಠಾನಕ್ಕೆ ಗುಚ್ಛವಾರು ಕನಿಷ್ಠ ಪ್ರೀಮಿಯಂ ದರ(L1) ನಿಗದಿ ಪಡಿಸಿ ಆಯ್ಕೆಯಾಗುವ ವಿಮಾ ಸಂಸ್ಥೆಗಳನ್ನು ಹಂಚಿಕೆಮಾಡಿ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು. ವಿಮಾ ಸಂಸ್ಥೆಗಳು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಅಧಿಸೂಚಿಸಲಾದ ಬೆಳೆ ಮತ್ತು ಹಂಚಿಕೆಯಾದ ಗುಚ್ಛದಲ್ಲಿನ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುವುದು.

ಆ. 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಆಯ್ಕೆಯಾಗುವ ವಿಮಾ ಸಂಸ್ಥೆಗಳು ಇಲಾಖೆ ನಿಗಧಿಪಡಿಸಿದ ವಿಮಾ ಮೊತ್ತ, ವಿಮಾ ಕಂತಿನ ದರಗಳ ಹಾಗೂ ಬೆಳೆ ವಿಮಾ ನಷ್ಟ ಪರಿಹಾರದ ಹಂತ (Payout Structures) ಗಳ ಪ್ರಕಾರ ನಿಯಮಾನುಸಾರ ಬೆಳೆ ವಿಮೆ ಪರಿಹಾರ ನೀಡುವುದು.

9. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC), ಬೆಂಗಳೂರು ಇವರು ಒದಗಿಸುವ ವಿಮೆ ಘಟಕವಾರು ಹವಾಮಾನ ಕೇಂದ್ರಗಳು [AutomaticTelemetric Weather Stations (AWS)] ಮತ್ತು ಮಳೆಮಾಪನ ಕೇಂದ್ರಗಳು [Telemetric rainguages (TRG)] ಹಾಗೂ ಪರ್ಯಾಯ ಹವಾಮಾನ ಮತ್ತು ಮಳೆಮಾಪನ ಕೇಂದ್ರಗಳ ಪ್ರತಿ ವಿಮಾ ಘಟಕವಾರು ವಿವರಗಳನ್ನುಳ್ಳ ಸರ್ಕಾರದ ಆದೇಶ ಸಂಖ್ಯೆ:ಕೃಇ/93/ಕೃಕೈಉ/2018 ಬೆಂಗಳೂರು ದಿ:09/11/2018 ರಲ್ಲಿ ಹೊರಡಿಸಲಾಗಿರುವ ಅಧಿಸೂಚನೆಯನ್ನು 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೂ ಮುಂದುವರೆಸಲಾಗಿದೆ.

10. ಮೇಲೆ ಓದಲಾದ (7) ರ ಬಿಡ್ ಪೂರ್ವ (Pre –bid) ಸಭೆಯಲ್ಲಿ ಹೆಚ್ಚುವರಿ ಮಾಹಿತಿ ನೀಡಲಾಗಿದೆ ಹಾಗೂ ವಿಮಾ ಕಂಪನಿ ರವರುಗಳು ಚರ್ಚಿಸಿರುವ ಪ್ರಶ್ನಾವಳಿಗಳಿಗೂ ಮಾಹಿತಿಗಳನ್ನು ನೀಡಲಾಗಿರುತ್ತದೆ.

11. ಮೇಲೆ ಓದಲಾದ (8) ರ ಪತ್ರದಲ್ಲಿ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳ ಅವಧಿಗೆ ಸರ್ಕಾರದ ಆದೇಶವನ್ನು ಹೊರಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶ ಹೊರಡಿಸಲಾಗಿದೆ.

## ಸರ್ಕಾರದ ಆದೇಶ ಸಂಖ್ಯೆ : HORTI/34/HCM/2019-R and I-Horti-Sec,

## ದಿನಾಂಕ: 22-05-2019

1. ಕರ್ನಾಟಕ ರಾಜ್ಯದಲ್ಲಿ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿಯಲ್ಲಿ ಅನುಬಂಧ-I ರಲ್ಲಿ ನೀಡಿರುವಂತೆ ವಿವಿಧ ತೋಟಗಾರಿಕೆ ಬೆಳೆಗಳನ್ನು 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಗ್ರಾಮ ಪಂಚಾಯತಿ/ನಗರ ಸ್ಥಳೀಯ ಸಂಸ್ಥೆಗಳ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಅಧಿಸೂಚಿಸಲಾಗಿದೆ.
2. ಜಿಲ್ಲಾವಾರು, ತಾಲ್ಲೂಕುವಾರು, ಬೆಳೆವಾರು ಅಧಿಸೂಚಿಸಲ್ಪಟ್ಟ ವಿಮಾ ಘಟಕಗಳ (ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳು) ವಿವರಗಳನ್ನು ಅನುಬಂಧ – II ರಲ್ಲಿ ನೀಡಲಾಗಿದೆ.
3. ಅಧಿಸೂಚಿಸಲಾದ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ (R-WBCIS) ಬೆಳೆ ಸಾಲ ಪಡೆಯುವ (Loanee)

ಮತ್ತು ಬೆಳೆ ಸಾಲ ಪಡೆಯದ (Non Loanee) ರೈತರಿಗೆ ವಿಮಾ ಮೊತ್ತವು ಜಿಲ್ಲೆಗಳ ಬೆಳೆವಾರು ಸರಾಸರಿ ಹಣಕಾಸು ಪ್ರಮಾಣಕ್ಕೆ (Crop-wise district average of Scale of Finance) ಸಮನಾಗಿದ್ದು, ರೈತರ ಪಾಲಿನ ವಿಮಾ ಕಂತಿನ ಮೊತ್ತವು ಬೆಳೆ ವಿಮಾ ಮೊತ್ತದ ಶೇ. 5 ರಷ್ಟು ಆಗಿರುತ್ತದೆ. ವಿಮಾ ಮೊತ್ತದ ಹಾಗು ವಿಮಾ ಕಂತಿನ ವಿವರಗಳನ್ನು ಅನುಬಂಧ-III ರಲ್ಲಿ ನೀಡಲಾಗಿದೆ. ಒಂದು ವೇಳೆ ಟೆಂಡರ್ ಮೂಲಕ ಅಂತಿಮಗೊಳಿಸಿದ ಬೆಳೆ ವಿಮಾ ಕಂತಿನ ಮೊತ್ತವು ಬೆಳೆ ವಿಮಾ ಮೊತ್ತದ ಶೇ. 5 ಕ್ಕಿಂತ ಕಡಿಮೆ ಬಿದ್ದಲ್ಲಿ ರೈತರ ಪಾಲಿನ ವಿಮಾ ಕಂತಿನ ಮೊತ್ತವನ್ನು ಅದರಂತೆ ಪರಿಗಣಿಸಲಾಗುವುದು. ವಾರ್ಷಿಕ ಮತ್ತು ವಾಣಿಜ್ಯ ತೋಟಗಾರಿಕೆ ಬೆಳೆಗಳಿಗೆ ಮುಂಗಾರು ಮತ್ತು ಹಿಂಗಾರು 2019-20 ರ ಅವಧಿಗೆ ಟೆಂಡರ್ ಅನುಮೋದಿತ ಪ್ರೀಮಿಯಂ ದರಕ್ಕೆ, ರೈತರು ಪಾವತಿಸುವ ಕನಿಷ್ಠ ಪ್ರೀಮಿಯಂ ಮೊತ್ತವನ್ನು ಹೊರತುಪಡಿಸಿ, ಪ್ರೀಮಿಯಂ ದರದಲ್ಲಿನ ವ್ಯತ್ಯಾಸದ ಮೊತ್ತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಮನಾಗಿ ತಲಾ ಶೇಕಡಾ 50 ರಂತೆ ವೆಚ್ಚವನ್ನು ಭರಿಸಲು ಹಾಗೂ ರಾಜ್ಯದ ಪಾಲಿನ ಹಣವನ್ನು ಅನುಷ್ಠಾನಗೊಳಿಸುವ ವಿವಿಧ ವಿಮಾ ಸಂಸ್ಥೆಗಳಿಗೆ ಪಾವತಿಸಲಾಗುವುದು.

4. ಪ್ರಸಕ್ತ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಅನುಷ್ಠಾನಕ್ಕೆ ಯೋಜನೆವಾರು, ಬೆಳೆವಾರು ರೈತರ ವಿವರಗಳನ್ನು ಆನ್ ಲೈನ್ ಪೋರ್ಟಲ್ (www.samrakshane.karnataka.gov.in) ಮೂಲಕ ನೊಂದಾಯಿಸಲು ಆದೇಶಿಸಿದೆ.
5. 2019-20 ನೇ ಸಾಲಿನ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ ಯಡಿ (RWBCIS)ಮುಂಗಾರು ಮತ್ತು ಹಿಂಗಾರು ಅವಧಿಗಳಿಗೆ ತಾಲ್ಲೂಕುವಾರು / ಹೋಬಳಿವಾರು/ಗ್ರಾಮ ಪಂಚಾಯಿತಿ / ವಿಮಾಘಟಕವಾರು / ಬೆಳೆವಾರು Insurance Unit wise pay out structure (Term Sheets) ಗಳನ್ನು ಅನುಬಂಧ-IV ರಲ್ಲಿ ನೀಡಲಾಗಿದೆ.
6. 2019-20 ನೇ ಸಾಲಿನ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ (RWBCIS) ಮುಂಗಾರು ಮತ್ತು ಹಿಂಗಾರು ಅವಧಿಗಳಿಗೆ ಬೆಳೆವಾರು ಒಟ್ಟು ವಿಮೆ (Sum insured) ವಿವರವನ್ನು ಅನುಬಂಧ- V ರಲ್ಲಿ ನೀಡಲಾಗಿದೆ.
7. 2019-20 ನೇ ಸಾಲಿನ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ ಯಡಿ (RWBCIS) ಮುಂಗಾರು ಮತ್ತು ಹಿಂಗಾರು ಅವಧಿಗಳಿಗೆ ಬೆಳೆವಾರು ರಿಸ್ಕ್ ಅವಧಿಯ ಪ್ರಾರಂಭಿಕ ಮತ್ತು ಅಂತಿಮ ದಿನಾಂಕಗಳ ವಿವರವನ್ನು ಅನುಬಂಧ-VI ರಲ್ಲಿ ನೀಡಲಾಗಿದೆ.
8. ಈ ಯೋಜನೆಯಡಿ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳಾದ ಆಲಿಕಲ್ಲು ಮಳೆ (Hailstorm) ಮತ್ತು ಮೇಘ ಸ್ಫೋಟ (Cloud Burst) ಸಂದರ್ಭದಲ್ಲಿ ಟರ್ಮ್ ಶೀಟ್ ನಲ್ಲಿ ನಮೂದಿಸಿರುವ ರಿಸ್ಕ್ ಅವಧಿ ಒಳಗೆ ಬೆಳೆ ನಷ್ಟವುಂಟಾದರೆ ವೈಯಕ್ತಿಕ ನಷ್ಟದ ನಿರ್ಧರಣೆಗಾಗಿ ಅನುಬಂಧ-VII ರಲ್ಲಿರುವಂತೆ ಜಿಲ್ಲೆಗಳು ಹಾಗೂ ಬೆಳೆಗಳನ್ನು ಮತ್ತು ಸಂಭವನೀಯ ಅವದಿಯನ್ನು ಅಧಿಸೂಚಿಸಲಾಗಿದೆ.ಇವುಗಳಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ವೈಯಕ್ತಿಕವಾಗಿ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ನಿಯಮಾನುಸಾರ ಇತ್ಯರ್ಥಪಡಿಸಲು ಹಾಗೂ ರಾಜ್ಯದ ಅಧಿಸೂಚಿಸಲಾದ ಅನುಬಂಧ-VII ರಂತೆ ಜಿಲ್ಲೆ ಮತ್ತು ಬೆಳೆಗಳಿಗೆ ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ. ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ, ಬೆಳೆ ವಿಮೆ ಮಾಡಿಸಿರುವ ರೈತರು ಈ ಬಗ್ಗೆ ಸಂಬಂಧಪಟ್ಟ ಹಣಕಾಸು ಸಂಸ್ಥೆ ಅಥವಾ ಅನುಷ್ಠಾನಗೊಳಿಸುವ ವಿಮಾ ಸಂಸ್ಥೆಗಳ ಕಛೇರಿಗಳಿಗೆ ಯಾವುದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 72 ಗಂಟೆಗಳೊಳಗಾಗಿ ತಿಳಿಸಬೇಕು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾ ಸಂಸ್ಥೆಗಳು ಬೆಳೆ ನಷ್ಟವನ್ನು ನಿರ್ಧರಿಸುವುದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ ನಿಯೋಜಿಸಬೇಕು. ಜಿಲ್ಲಾ ಕಂದಾಯ ಇಲಾಖೆ, ಕೃಷಿ ಇಲಾಖೆ ಹಾಗೂ ತೋಟಗಾರಿಕಾ ಇಲಾಖೆಯ ಆಡಳಿತವು ಬೆಳೆ ನಷ್ಟದ

ಪ್ರಮಾಣವನ್ನು ನಿರ್ಧರಿಸುವಲ್ಲಿ ವಿಮಾ ಸಂಸ್ಥೆಯವರಿಗೆ ನೆರವು ನೀಡತಕ್ಕದ್ದು. ಒಂದು ವೇಳೆ ಒಂದು ಅಧಿಸೂಚಿತ ವಿಮಾ ಘಟಕದಲ್ಲಿ ಗಂಡಾಂತರಗಳ ಕಾರಣಗಳಿಂದ ನೋಂದಾಯಿಸಲಾದ ವಿಸ್ತೀರ್ಣದ ಶೇ 25 ಕ್ಕಿಂತ ಕಡಿಮೆ ಇದ್ದಲ್ಲಿ ಪ್ರತಿ ರೈತರಿಗೆ ಆದ ನಷ್ಟದ ಅಂದಾಜನ್ನು ಮಾಡಿ ನಿಯಮಾನುಸಾರ ನಷ್ಟದ ಪರಿಹಾರವನ್ನು ಇತ್ಯಾರ್ಥಪಡಿಸತಕ್ಕದ್ದು. ಒಂದು ವೇಳೆ ಒಂದು ಅಧಿಸೂಚಿತ ವಿಮಾ ಘಟಕದಲ್ಲಿ ಗಂಡಾಂತರಗಳ ಕಾರಣಗಳಿಂದ ನೋಂದಾಯಿಸಲಾದ ವಿಸ್ತೀರ್ಣದ ಶೇ 25 ಕ್ಕಿಂತ ಹೆಚ್ಚು ಪ್ರದೇಶದಲ್ಲಿ ಬೆಳೆ ನಷ್ಟವಾದಲ್ಲಿ, ಮಾದರಿ ಆಧಾರಿತ ಸರ್ವೆ (Sample survey) ಮೂಲಕ ನಷ್ಟವನ್ನು ಅಂದಾಜಿಸಿ, ಆ ವಿಮಾ ಘಟಕದಡಿ ನೋಂದಾಯಿಸಿದ ಹಾಗೂ ಸಕಾಲದಲ್ಲಿ ಬೆಳೆ ನಷ್ಟ ಮಾಹಿತಿ ನೀಡಿದ ಎಲ್ಲಾ ರೈತರಿಗೆ ಸಮನಾಗಿ ನಷ್ಟವಾಗಿದೆ ಎಂದು ಪರಿಗಣಿಸಿ ನಿಯಾಮಾನುಸಾರ ನಷ್ಟಪರಿಹಾರ ಇತ್ಯಾರ್ಥಪಡಿಸತಕ್ಕದ್ದು.

9. ಪ್ರಸಕ್ತ 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ ಅನುಬಂಧ-2 ರಂತೆ ಅಧಿಸೂಚಿಸಲಾಗಿರುವ ವಿಮಾ ಘಟಕಗಳವಾರು ನೀಡಲಾಗಿರುವ ಬೆಳೆಗಳಿಗೆ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರಿಗೆ ಅರ್ಜಿ ಸಲ್ಲಿಸಿ ನೊಂದಾಯಿಸಲು ಅಂತಿಮ ದಿನಾಂಕವನ್ನು ಮುಂಗಾರು ಹಂಗಾಮಿಗೆ ಹಸಿರುಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವೀಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ನಿಂಬೆ, ಮತ್ತು ಪರಂಗಿ ಬೆಳೆಗಳಿಗೆ ದಿನಾಂಕ::30-06-2019 ಮತ್ತು ಮಾವು ಬೆಳೆಯನ್ನು ನೊಂದಾಯಿಸಲು 31.07.2019 ರವರೆಗೆ ನಿಗದಿಪಡಿಸಲಾಗಿರುತ್ತದೆ ಹಾಗೂ ಹಿಂಗಾರು ಹಂಗಾಮಿಗೆ ಅಧಿಸೂಚಿಸಲಾದ ಎಲ್ಲಾ ಬೆಳೆಗಳಿಗೆ ದಿನಾಂಕ:15-11-2019ರವರೆಗೆ ನಿಗದಿಪಡಿಸಲಾಗಿರುತ್ತದೆ. ಸಂಬಂದಿಸಿದ ಬ್ಯಾಂಕ್ ಗಳು ಬೆಳೆ ಸಾಲ ಮಂಜೂರಾಗಿರುವ ರೈತರನ್ನು ಕಡ್ಡಾಯವಾಗಿ ಯೋಜನೆಯಡಿಯಲ್ಲಿ ಒಳಪಡಿಸಿ ಬೆಳೆ ಸಾಲದ ಮೊತ್ತಕ್ಕೆ ರೈತರ ವಿಮಾ ಕಂತನ್ನು ಹೆಚ್ಚುವರಿಯಾಗಿ ಮಂಜೂರು ಮಾಡತಕ್ಕದ್ದು. ಬೆಳೆ ಸಾಲ ಪಡೆಯದ ರೈತರು ನಿಗದಿತ ಅರ್ಜಿಯೊಂದಿಗೆ ಪ್ರಸಕ್ತ ಸಾಲಿನ ಭೂಮಿ ಹೊಂದಿರುವುದರ ದಾಖಲೆಗಳಾದ ಪಹಣಿ, ಬ್ಯಾಂಕ್ ಖಾತೆ ಪಾಸ್ ಪುಸ್ತಕ, ಆಧಾರ್ ಕಾರ್ಡ್ ಮತ್ತು ಸ್ವಯಂಘೋಷಿತ (Self Declared) ಬೆಳೆ ವಿವರ ಸಲ್ಲಿಸುವುದು.

10. ಈ ಯೋಜನೆಯಡಿಯಲ್ಲಿ ಬೆಳೆ ಸಾಲ ಪಡೆಯದ ರೈತರೂ ಸಹ ನಿರೀಕ್ಷಿತ ಬೆಳೆ ಬಿತ್ತನೆ ಆಧಾರದ ಮೇಲೆ ಬಿತ್ತನೆ ಪೂರ್ವದಲ್ಲಿ ಪಾಲ್ಗೊಳ್ಳಬಹುದು. ಬೆಳೆ ಸಾಲ ಪಡೆದ ಹಾಗೂ ಪಡೆಯದ ರೈತರು, ಬೆಳೆ ವಿಮೆಗೆ ನೊಂದಾಯಿಸಿದ ನಂತರ ಬೇರೆ ಬೆಳೆ ಬಿತ್ತನೆ ಮಾಡಿದಲ್ಲಿ ಬೆಳೆ ಬದಲಾಯಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನೊಂದಣಿಗೆ ನಿಗದಿಪಡಿಸಿದ ಕೊನೆಯ ದಿನಾಂಕಕ್ಕಿಂತ 2 ದಿವಸ ಮುಂಚಿತವಾಗಿ ನೋಂದಾಯಿಸಿದ ಆರ್ಥಿಕ ಸಂಸ್ಥೆಗಳಲ್ಲಿ ಬಿತ್ತನೆ ದೃಢೀಕರಣ ಪತ್ರ ನೀಡುವುದು ಮತ್ತು ವಿಮೆ ಮಾಡಿಸಿದ ಬೆಳೆಯನ್ನು ಬದಲಾಯಿಸತಕ್ಕದ್ದು. ಅಂತಹ ಸಂದರ್ಭದಲ್ಲಿ ಬದಲಾಯಿಸಿದ ಬೆಳೆಯ ವಿಮಾ ಕಂತಿನ ಮೊತ್ತವು ಹೆಚ್ಚಿದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ರೈತರು ಭರಿಸತಕ್ಕದ್ದು ಅಥವಾ ಒಂದು ವೇಳೆ ಬದಲಾಯಿಸಿದ ಬೆಳೆಯ ವಿಮಾ ಕಂತಿನ ಮೊತ್ತ ಕಡಿಮೆ ಇದ್ದಲ್ಲಿ ಉಳಿದ ವಿಮಾ ಕಂತನ್ನು ರೈತರಿಗೆ ಮರುಪಾವತಿಸುವುದು.

11. ಬ್ಯಾಂಕುಗಳು ವಿಮೆ ಮಾಡಿಸಿದ ರೈತರ ಪ್ರೀಮಿಯಂ ಮೊತ್ತ ಹಾಗೂ ರೈತರ ವಿವರಗಳನ್ನು ನಿಗದಿತ ನಮೂನೆ ಯಲ್ಲಿ ಹಾಗೂ ನಿಗದಿತ ಸಮಯದ ಒಳಗೆ ಸಂರಕ್ಷಣೆ ತಂತ್ರಾಂಶದ (Online portal) ಮೂಲಕ ದಾಖಲಿಸಿ ವಿಮಾ ಸಂಸ್ಥೆಗೆ ಸಲ್ಲಿಸುವುದು. ಬ್ಯಾಂಕುಗಳು ಸಂರಕ್ಷಣೆ ಪೋರ್ಟಲ್ ಮೂಲಕ ರೈತರ ವಿವರಗಳನ್ನು ವಿಮಾ ಸಂಸ್ಥೆಗೆ ನೀಡುವವರೆಗೂ ಅಂತಹ ರೈತರ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡತಕ್ಕದ್ದಲ್ಲ.

12. ರೈತರ ವಿಮಾ ಕಂತಿನ ಮೊತ್ತದಲ್ಲಿ ಶೇ. 4 ರಷ್ಟು ಸೇವಾ ಶುಲ್ಕವನ್ನು ಬ್ಯಾಂಕುಗಳಿಗೆ ವಿಮಾ ಸಂಸ್ಥೆಯು ನೀಡತಕ್ಕದ್ದು.

13. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ನೇರವಾಗಿ ರೈತರ ಖಾತೆಗೆ ಜಮಾ ಮಾಡತಕ್ಕದ್ದು ಹಾಗೂ ಸದರಿ ವಿವರಗಳನ್ನು ಇಲಾಖೆಗೆ ಸಲ್ಲಿಸುವುದು ಮತ್ತು ರೈತರ ಖಾತೆಗೆ ಜಮಾ ಮಾಡಿದ ವಿವರಗಳನ್ನು ಇಲಾಖೆಯು ಸಂರಕ್ಷಣೆ ಯಲ್ಲಿ ಮತ್ತು ಬ್ಯಾಂಕ್ ಅಧಿಕಾರಿಗಳು ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುವುದು

14. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (KSNDMC), ಬೆಂಗಳೂರು ಇವರು ಒದಗಿಸುವ ವಿಮೆ ಘಟಕವಾರು ಹವಾಮಾನ ಕೇಂದ್ರಗಳು [AutomaticTelemetric Weather Stations (AWS)] ಮತ್ತು ಮಳೆಮಾಪನ ಕೇಂದ್ರಗಳು [Telemetric rainguages (TRG)] ಹಾಗೂ ಪರ್ಯಾಯ ಹವಾಮಾನ ಮತ್ತು ಮಳೆಮಾಪನ ಕೇಂದ್ರಗಳ ಪ್ರತಿ ವಿಮಾ ಘಟಕವಾರು ವಿವರಗಳನ್ನುಳ್ಳ ಸರ್ಕಾರದ ಆದೇಶ ಸಂಖ್ಯೆ:ಕೃಇ/93/ಕೃಕೈಉ/2018 ಬೆಂಗಳೂರು ದಿ:09/11/2018 ರಲ್ಲಿ ಹೊರಡಿಸಲಾಗಿರುವ ಅಧಿಸೂಚನೆಯನ್ನು 2019-20 ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೂ ಮುಂದುವರೆಸಿದೆ.

15. ವಿಮಾ ಸಂಸ್ಥೆಗಳು ಆಯ್ದ ವಿಮಾ ಘಟಕಗಳಲ್ಲಿ ಹವಾಮಾನ ಅಂಶಗಳನ್ನು ಅಳೆಯಲು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಸ್ಥಾಪಿಸಿರುವ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರಗಳನ್ನು ಉಪಯೋಗಿಸಲು ಮತ್ತು ಯಾವುದೇ ಕಾರಣದಿಂದ ಹವಾಮಾನ ಅಂಶಗಳ ಮಾಹಿತಿಯು ಸಂಬಂಧಿಸಿದ ಹವಾಮಾನ ಕೇಂದ್ರಗಳಲ್ಲಿ ಲಭ್ಯವಾಗದಿದ್ದಲ್ಲಿ ಅಧಿಸೂಚಿಸಲಾದ ಪರ್ಯಾಯ ಹವಾಮಾನ ಕೇಂದ್ರಗಳ ಮಾಹಿತಿಯನ್ನು ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರ ಲೆಕ್ಕಹಾಕುವುದು. ಮಳೆಯ ಪ್ರಮಾಣವನ್ನು ಅಳೆಯಲು ಗ್ರಾಮಪಂಚಾಯಿತಿ ಮಟ್ಟದಲ್ಲಿ ಅಳವಡಿಸಲಾದ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರವನ್ನು ಮತ್ತು ಇತರೆ ಹವಾಮಾನ ಅಂಶಗಳಾದ ತಾಪಮಾನ, ಗಾಳಿಯ ವೇಗ, ಆದ್ರತೆ ಇತ್ಯಾದಿ., ಇವುಗಳನ್ನು ಅಳೆಯಲು ಹೋಬಳಿ/ತಾಲ್ಲೂಕು ಕೇಂದ್ರಗಳಲ್ಲಿ ಅಥವಾ ಹೋಬಳಿ/ತಾಲ್ಲೂಕು ಕೇಂದ್ರದ ಹತ್ತಿರದಲ್ಲಿರುವ ಹವಾಮಾನ ಕೇಂದ್ರವನ್ನು ಉಪಯೋಗಿಸುವುದು.

ವಿಮಾ ಪರಿಹಾರವನ್ನು ಅಂದಾಜಿಸಲು ಅಧಿಸೂಚಿಸಲಾದ ಸಂಬಂಧಿತ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರಗಳಿಂದ ದಾಖಲಾದ ಮಾಹಿತಿಯನ್ನಾಧರಿಸಿ ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಯಾವುದೇ ಸಂಧರ್ಭದಲ್ಲಿ ಅಧಿಸೂಚಿಸಲಾದ ಸಂಬಂಧಿತ ಮಳೆ ಮಾಪನ ಹಾಗೂ ಹವಾಮಾನ ಕೇಂದ್ರಗಳಿಂದ ದಾಖಲಾದ ಮಾಹಿತಿಯನ್ನು ತಿದ್ದುವ/ಬದಲಾಯಿಸುವ ಅವಕಾಶವಿರುವುದಿಲ್ಲ.

16. ವಿಮಾ ಪರಿಹಾರದ ಮೊತ್ತವನ್ನು ನೀಡಲು ಅಧಿಸೂಚಿಸಲಾದ Term sheet (Pay out structure, Duration, Index ಇತ್ಯಾದಿ ಗಳನ್ನು) ಆಧರಿಸಿ ಮಾತ್ರ ಪರಿಗಣಿಸುವುದು.

17. ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪ ಸಂಬಂದಿತ ಬೆಳೆ ನಷ್ಟವನ್ನು ಜಿಲ್ಲಾ ಮಟ್ಟದಲ್ಲಿ ಕೃಷಿ, ಕಂದಾಯ, ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳು, ಸಂಬಂಧಿಸಿದ ವಿಮಾ ಸಂಸ್ಥೆಯ ಅಧಿಕಾರಿಗಳನ್ನೊಳಗೊಂಡ ಜಂಟಿ ಸಮಿತಿಯು ಅಂದಾಜಿಸಿ ತೀರ್ಮಾನಿಸಿದ ಅಂತಿಮ ವರದಿಯನ್ನು ಅನುಮೋದಿತ ಬೆಳೆವಿಮಾ ಕಂಪನಿಯು ಸ್ವೀಕರಿಸಿದ 15 ದಿನಗಳೊಳಗೆ ಬೆಳೆವಿಮೆ ಮಾಡಿಸಿದ ರೈತರಿಗೆ ನಿಯಮಾನುಸಾರ ಇತ್ಯರ್ಥಪಡಿಸತಕ್ಕದ್ದು.

18. ಕ್ಲಸ್ಟರ್ ವಾರು ಆಯ್ಕೆಯಾದ ವಿಮಾ ಸಂಸ್ಥೆಗಳು ವಿಮಾಪರಿಹಾರವನ್ನು ಯೋಜನೆ ಮಾರ್ಗಸೂಚಿಯನ್ವಯ ಸಕಾಲದಲ್ಲಿ ಪಾವತಿಸತಕ್ಕದ್ದು.

19. ಯೋಜನೆಯ ಅನುಷ್ಠಾನಕ್ಕಾಗಿ ಕೈಗೊಳ್ಳಲಾಗುವ ಪ್ರಚಾರ, ಪ್ರಕಟಣೆ ಮತ್ತು ತರಬೇತಿ ನೀಡುವಲ್ಲಿ ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಮತ್ತು ವಿಮಾ ಸಂಸ್ಥೆಗಳು ಪರಸ್ಪರ ಸಹಕಾರ ನೀಡಬೇಕು.

20. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅನುಷ್ಠಾನ ವಿಮಾ ಸಂಸ್ಥೆಗಳು ಬೆಳೆ ವಿಮಾ ಯೋಜನೆಯಲ್ಲಿ ಭಾಗವಹಿಸಲಿರುವ ವಿವಿಧ ಸಂಸ್ಥೆಗಳ ಜೊತೆಯಲ್ಲಿ ಸಮನ್ವಯ ಸಾಧಿಸತಕ್ಕದ್ದು.

21. ಈ ಯೋಜನೆಯನ್ನು ಜಾರಿಯಲ್ಲಿರುವ ಮಾರ್ಗಸೂಚಿಗಳನ್ವಯ ಹಾಗೂ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶ, ಸುತ್ತೋಲೆ, ಟೆಂಡರ್ ಪ್ರಕಟಣೆ ಹಾಗೂ ಕಾರ್ಯದೇಶಗಳಲ್ಲಿ ವಿಧಿಸಿದ ಷರತ್ತುಗಳು ಮತ್ತು ನಿಬಂಧನೆ ಗಳನ್ವಯ ಅನುಷ್ಠಾನಗೊಳಿಸುವುದು.

22. ಯಾವುದೇ ವಿಮಾ ಮೊತ್ತ, ಕ್ಲೇಮ್/sub–standard ಕ್ಲೇಮ್ ಪಾವತಿಗೆ ಸಂಬಂಧಿಸಿದಂತೆ ವಿವಾದಗಳು ಇದ್ದಲ್ಲಿ ಮಾರ್ಗಸೂಚಿ ಅನ್ವಯ ಕೃಷಿ ಮಂತ್ರಾಲಯದ ಸಹಕಾರ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ, ಭಾರತ ಸರ್ಕಾರದ ಮೂಲಕ ಇತ್ಯರ್ಥಪಡಿಸಲಾಗುವುದು.

23. ವಿಮಾ ಘಟಕಗಳು, ಗ್ರಾಮ ಪಂಚಾಯತಿ/ ನಗರ ಸ್ಥಳೀಯ ಸಂಸ್ಥೆಗಳು ಆಗಿರುವುದರಿಂದ ಹೊಸದಾಗಿ ಸೃಜಿಸಿರುವ/ ಸೃಜಿಸಲಾಗುವ ತಾಲ್ಲೂಕುಗಳಿಂದಾಗಿ ವಿಮಾ ಘಟಕದ ವ್ಯಾಪ್ತಿಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ

22/05/19

(ಅಮರೇಶ )

ಸರ್ಕಾರದ ಅಧೀನ ಕಾರ್ಯದರ್ಶಿ

ತೋಟಗಾರಿಕೆ ಇಲಾಖೆ

22/05

ರವರಿಗೆ,

ಕಂಪೈಲರ್, ಕರ್ನಾಟಕ ಗೆಜೆಟ್, ಬೆಂಗಳೂರು -ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಎ&ಇ)/(ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.
6. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
7. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ, ಯಲಹಂಕ, ಬೆಂಗಳೂರು -(ನಿರ್ದೇಶಕರು ತೋಟಗಾರಿಕೆ ಇಲಾಖೆ ಮುಖಾಂತರ).
9. ಎಲ್ಲಾ ಜಿಲ್ಲಾಧಿಕಾರಿಗಳು - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ.)

10. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
11. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಹಾಗು ತೋಟಗಾರಿಕೆ ಉಪ ನಿರ್ದೇಶಕರು - (ನಿರ್ದೇಶಕರು ತೋಟಗಾರಿಕೆ ಇಲಾಖೆ ಮುಖಾಂತರ).
12. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
13. ಎಲ್ಲಾ ಲೀಡ್ ಬ್ಯಾಂಕುಗಳು –(ಎಸ್.ಎಲ್.ಬಿ.ಸಿ. ಮುಖಾಂತರ).
14. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು- (ಅಪೆಕ್ಸ್ ಬ್ಯಾಂಕ್‌ನ ಮುಖಾಂತರ).
15. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ)
16. ಎಲ್ಲಾ ನೋಡಲ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ)
17. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
18. ಎಲ್ಲಾ ಅನುಮೋದಿತ ವಿಮಾ ಕಂಪನಿಗಳಿಗೆ - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
19. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
20. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
22. ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ.
23. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತುರೇಷ್ಮೆಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
24. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.